ಸದರಿ ತೆರಿಗೆಯನ್ನು ನಿಗದಿಪಡಿಸುವಾಗ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ತೆರಿಗೆಗಳು ಮತ್ತು ಫೀಜುಗಳು) ನಿಯಮಗಳು, 1994ರಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಗ್ರಾಮ ಪಂಚಾಯತಿಗಳು ಪಾಲಿಸಿ ಅನಂತರ ನಿರ್ದಿಷ್ಟಪಡಿಸಬೇಕಾಗುತ್ತದೆ.

ಈ ವಿಷಯದ ಬಗ್ಗೆ ಅಕ್ರಮಗಳು, ಅವ್ಯವಹಾರಗಳು ಅಥವಾ ಸಾರ್ವಜನಿಕರಿಗೆ ಗೊಂದಲ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಇಲ್ಲ.

ಇ) ಇಲ್ಲ.

ಈ) ಇಲ್ಲ.

ಉ) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಲೆಕ್ಕ ಪತ್ರಗಳು ಮತ್ತು ಬಜೆಟ್) ನಿಯಮಗಳು,1995ರ 64ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿರುವಂತೆ ಪ್ರತಿ ಗ್ರಾಮ ಪಂಚಾಯಿತಿಯು ಕಾಲಕಾಲಕ್ಕೆ ಅರ್ಜಿಸಿದ ಅಥವಾ ವಿಲೇ ಮಾಡಿದ ಭೂಮಿಗಳ ಮತ್ತು ಕಟ್ಟಡಗಳಂತಹ ಸ್ಥಿರಸೊತ್ತುಗಳ ವಿವರಗಳನ್ನು 30ನೇ ಸಂಖ್ಯೆಯ ನಮೂನೆಯಲ್ಲಿರುವ ಸ್ಥಿರ ಸೊತ್ತುಗಳ ವಹಿಯಲ್ಲಿ ದಾಖಲು ಮಾಡತಕ್ಕದ್ದೆಂದು ನಿರ್ದಿಷ್ಟ ಪಡಿಸಲಾಗಿದೆ. ಅದರಂತೆ ಗ್ರಾಮ ಪಂಚಾಯತಿಗಳ ಸ್ವಂತ ಆಸ್ತಿಗಳಾದ ಗ್ರಾಮರಾಣ, ಪಂಚಾಯತಿ ಕಟ್ಟಡ, ಶಾಲಾ ಕಟ್ಟಡ ಇತ್ಯಾದಿ ಸೊತ್ತುಗಳನ್ನು ದಾಖಲಿಸುವುದಲ್ಲದೆ, ಗ್ರಾಮದಲ್ಲಿನ ಸಾರ್ವಜನಿಕರ ಸೊತ್ತುಗಳಾದ ಮಸತಿ, ಮನೆ, ನಿವಾಸ, ಬಯಲು ಜಾಗ ಇತ್ಯಾದಿಗಳನ್ನು ವಿವರವಾಗಿ ದಾಖಲಿಸಲು ಗ್ರಾಮ ಪಂಚಾಯತಿಗಳು ನಿರ್ಧಿಷ್ಟ ಕಾಲದೊಳಗೆ ಪೂರ್ಣಗೊಳಿಸುವಂತೆ ಈ ಕಾರ್ಯವನ್ನು ಸಮರ್ಪಕವಾಗಿ ಪೂರ್ಣಗೊಳಿಸಲು ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡುವಂತೆ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ದಿನಾಂಕ: 27-8-96ರಂದು ಸೂಚನೆಗಳನ್ನು ನೀಡಲಾಗಿದೆ.

ಕೃಷ್ಣರಾಜಪುರದ ಆಸ್ಪತ್ರೆ ಕಟ್ಟಡ ನಿರ್ಮಾಣದ ಬಗ್ಗೆ.

312 (708) ಶ್ರೀ ಅಶ್ವತ್ಥ್‌ನಾರಾಯಣ ರೆಡ್ಡಿ (ವರ್ತೂರು):

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ದಿ:1-1-95 ರಿಂದ 31-12-96 ರವರೆವಿಗೆ ಆರೋಗ್ಯ ಮತ್ತು ಕು.ಕ. ಇಲಾಖೆಯಿಂದ ಪ್ರಾ. ಆ. ಘಟಕಗಳನ್ನು, ಪ್ರಾ.ಆ. ಕೇಂದ್ರಗಳನ್ನು ಮತ್ತು ಹೆರಿಗೆ ಆಸ್ಪತ್ರೆಗಳನ್ನು ಎಷ್ಟು ಮಂಜೂರು ಮಾಡಲಾಗಿರುತ್ತದೆ; (ಜಿಲ್ಲಾವಾರು ಮಾಹಿತಿ ನೀಡುವುದು);

2) 1991-92ನೇ ಸಾಲಿನಲ್ಲಿ ವರ್ತೂರು ವಿಧಾನಸಭೆ ಕ್ಷೇತ್ರದ ಕೃಷ್ಣರಾಜಪುರ ಗ್ರಾಮದಲ್ಲಿ 100 ಹಾಸಿಗೆಯ ಆಸ್ಪತ್ರೆ ಕಟ್ಟಡ ಪ್ರಾರಂಭವಾಗಿದ್ದು, ನಂತರ ಕಾಮಗಾರಿ ಕೆಲಸ ನಿಂತಿರುವುದಕ್ಕೆ ಕಾರಣವೇನು? ಈ ಕಟ್ಟಡವನ್ನು ತ್ವರಿತವಾಗಿ ಪೂರ್ಣಮಾಡಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಲಾಗುತ್ತದೆ? ಎಷ್ಟು ದಿನಗಳಲ್ಲಿ ಕಟ್ಟಡವನ್ನು ಪೂರೈಸಲಾಗುವುದು;

ಡಾ|| ಹೆಚ್.ಸಿ.ಮಹದೇವಪ್ಪ. (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.)

1) 1994-95 ಮತ್ತು 95-96 ರಲ್ಲಿ ಪ್ರಾ. ಆ. ಘಟಕ ಪ್ರಾ. ಆ. ಕೇಂದ್ರ ಮತ್ತು ಹೆರಿಗೆ ಆಸ್ಪತ್ರೆ ಮಂಜೂರು ಮಾಡಿರುವ ವಿವರ ಈ ಕೆಳಕಂಡಂತಿದೆ:

ವರ್ಷ	ಪ್ರಾ.ಆ. ಘಟಕ	ಪ್ರಾ.ಆ. ಕೇಂದ್ರ	ಹೆರಿಗೆ ಆಸ್ಪತ್ರೆ
1994-95	-	102	03
1995-96	-	50	03

ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ. ದಿನಾಂಕ: 1-4-87 ರಿಂದ ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮಂಜೂರು ಮಾಡುವುದನ್ನು ರದ್ದುಗೊಳಿಸಲಾಗಿದೆ.

2) ಸದರಿ ಗ್ರಾಮದಲ್ಲಿ 100 ಹಾಸಿಗೆಗಳ ಆಸ್ಪತ್ರೆ ಕಟ್ಟಡ ಪ್ರಾರಂಭಿಸಿದ್ದು ದಿನಾಂಕ: 1-7-94 ರಂದು ಗುದ್ದಲಿ ಪೂಜೆ ನೆರವೇರಿಸಲಾಗಿದ್ದು ಅಡಿಪಾಯ ಮಟ್ಟದ ನಂತರ ಗುತ್ತಿಗೆದಾರರು ಕಟ್ಟಡ ಕಾರ್ಯ ಸ್ಥಗಿತ ಗೊಳಿಸಲಾಗಿ ಅವರಿಗೆ ನೋಟೀಸು ಜಾರಿ ಮಾಡಲಾಗಿರುತ್ತದೆ. ಶೀಘ್ರವಾಗಿ ಕಟ್ಟಡ ಕಾಮಗಾರಿ ಪೂರೈಸುವಂತೆ ಲೋಕೋಪಯೋಗಿ ಇಲಾಖೆಗೆ ಸೂಚಿಸಲಾಗುವುದು.

ಅನುಬಂಧ-1

ರಾಜ್ಯದಲ್ಲಿ 1994-95 ರಲ್ಲಿ ಒಟ್ಟು 102 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮತ್ತು 3 ಪ್ರಸೂತಿ ಗೃಹಗಳನ್ನು, 1995-96 ರಲ್ಲಿ ಒಟ್ಟು 50 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮತ್ತು 3 ಪ್ರಸೂತಿ ಗೃಹಗಳನ್ನು ಮಂಜೂರು ಮಾಡಿರುವ ಬಗ್ಗೆ ಜಿಲ್ಲಾವಾರು ಮಾಹಿತಿಯನ್ನು ಈ ಕೆಳಗಿನಂತೆ ವಿವರಣೆ ಸಲ್ಲಿಸಿದೆ.

ಕ್ರ. ಸ.	ಜಿಲ್ಲೆಯ ಹೆಸರು	1994-95 ರಲ್ಲಿ ಮಂಜೂರಾದ ಪ್ರಾ.ಆ. ಕೇಂದ್ರ	1995-96 ರಲ್ಲಿ ಮಂಜೂರಾದ		
			ಪ್ರಸೂತಿ ಗೃಹ	ಪ್ರಾ.ಆ. ಕೇಂದ್ರ	ಪ್ರಸೂತಿ ಗೃಹ
1.	ಬೆಂಗಳೂರು (ನಗರ)	1	1	-	1
2.	ಬೆಂಗಳೂರು(ಗ್ರಾಮಾಂತರ)	8	-	4	-
3.	ಚಿತ್ರದುರ್ಗ	7	-	3	-
4.	ಕೋಲಾರ	3	-	2	-
5.	ಶಿವಮೊಗ್ಗ	3	-	2	1
6.	ತುಮಕೂರು	7	-	3	-
7.	ಬೆಳಗಾವಿ	9	-	4	-

8397- 31

8. ಬಿಜಾಪುರ	8	-	3	-
9. ಧಾರವಾಡ	5	-	4	-
10. ಉತ್ತರ ಕನ್ನಡ	3	-	1	-
11. ಬಳ್ಳಾರಿ	11	-	1	-
12. ಬೀದರ್	2	-	2	-
13. ಗುಲ್ಬರ್ಗ	6	-	2	-
14. ರಾಯಚೂರು	5	-	2	-
15. ಚಿಕ್ಕಮಗಳೂರು	2	-	2	-
16. ದಕ್ಷಿಣ ಕನ್ನಡ	8	-	1	-
17. ಹಾಸನ	3	-	3	-
18. ಕೊಡಗು	1	-	1	-
19. ಮಂಡ್ಯ	2	2	2	1
20. ಮೈಸೂರು	8	-	7	-
ಒಟ್ಟು	102	3	50	3

ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮಂಜೂರು ಮಾಡುವುದನ್ನು ಸರ್ಕಾರಿ ಆದೇಶ ಸಂಖ್ಯೆ : ಆಕುಕ 349 ಸಿಜಿಎಸ್ 86 ದಿನಾಂಕ : 11-5-87ರ ಪ್ರಕಾರ ದಿ: 1-4-87 ರಿಂದ ರದ್ದುಗೊಳಿಸಲಾಗಿದೆ.

ತಾಲ್ಲೂಕು ಪಂಚಾಯತ್‌ಗಳಿಗೆ ಬರಬೇಕಾಗಿರುವ ಸ್ಟಾಂಪುಗಳ ಸೇಸ್ಸು.

313 (305) ಶ್ರೀ ಬಸನಗೌಡ ರಾ. ಪಾಟೀಲ್ (ವಿಜಾಪುರ):

ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಪಂಚಾಯತಿಗಳಿಗೆ ಬರಬೇಕಾಗಿರುವ ಸ್ಟಾಂಪುಗಳ ಮೇಲಿನ ಶೇಕಡ 3 ಸೆಸ್ಸು ಸರಿಯಾಗಿ ತಾಲ್ಲೂಕು ಪಂಚಾಯಿತಿಗಳಿಗೆ ಪಾವತಿಯಾಗುತ್ತಿದೆಯೇ? ಪಾವತಿಯಾಗದೆ ಇರುವ ತಾಲ್ಲೂಕು ಪಂಚಾಯತ್‌ಗಳೆಷ್ಟು? ಅವು ಯಾವುವು;

ಆ) ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.)